ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 06-01-1990.

# *ಹೋಲಿ ಹಂಸಗಳ ಪರಿಭಾಷೆ.*

(होलीहंस की परिभाषा)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಜ್ಞಾನಸಾಗರ ತಂದೆಯು ಹೋಲಿ(ಪವಿತ್ರ) ಹಂಸಗಳ ಸಂಘಟನೆಯನ್ನು ನೋಡುತ್ತಿದ್ದಾರೆ. ಹೋಲಿಹಂಸ ಅರ್ಥಾತ್ ಸ್ವಚ್ಛತೆ ಮತ್ತು ವಿಶೇಷತೆಯುಳ್ಳ ಆತ್ಮರು . ಸ್ವಚ್ಛತೆ ಅರ್ಥಾತ್ ಮನ- ವಚನ-ಕರ್ಮ, ಸಂಬಂಧ ಎಲ್ಲದರಲ್ಲಿ ಪವಿತ್ರತೆ. ಪವಿತ್ರತೆಯ ಸಂಕೇತವಾಗಿ ಸದಾ ಬಿಳಿಯ ಬಣ್ಣವನ್ನು ತೋರಿಸುತ್ತಾರೆ. ತಾವು ಪವಿತ್ರ ಹಂಸಗಳೂ ಸಹ ಶ್ವೇತವಸ್ತ್ರಧಾರಿ. ಸತ್ಯಹೃದಯಿ ಅರ್ಥಾತ್ ಸ್ವಚ್ಛತಾ ಸ್ವರೂಪರಾಗಿದ್ದೀರಿ. ತನು-ಮನ ಮತ್ತು ಹೃದಯದಿಂದ ಸದಾ ಕಲೆರಹಿತ ಅರ್ಥಾತ್ ಸ್ವಚ್ಛವಾಗಿದ್ದೀರಿ. ಒಂದುವೇಳೆ ಯಾರಾದರೂ ತನುವಿನಿಂದ ಅರ್ಥಾತ್ ಬಾಹ್ಯವಾಗಿ ಎಷ್ಟಾದರೂ ಸ್ವಚ್ಛವಾಗಿರಲಿ, ಶುಭ್ರವಾಗಿರಲಿ ಆದರೆ ಮನಸ್ಸಿನಿಂದ ಸ್ವಚ್ಛವಾಗಿರದಿದ್ದರೆ ಮೊದಲು ಮನಸ್ಸನ್ನು ಸ್ವಚ್ಛವಾಗಿಟ್ಟುಕೊಳ್ಳಿ ಎಂದು ಹೇಳುತ್ತಾರೆ. ಸ್ವಚ್ಛ ಮನಸ್ಸು ಹಾಗೂ ಸ್ವಚ್ಛ ಹೃದಯದವರ ಮೇಲೆ ಪ್ರಭು ರಾಜಿಯಾಗುತ್ತಾರೆ. ಜೊತೆಜೊತೆಗೆ ಸ್ವಚ್ಛ ಹೃದಯದವರ ಎಲ್ಲಾ ಮನೋಕಾಮನೆಗಳು ಈಡೇರುತ್ತವೆ. ಹಂಸದ ವಿಶೇಷತೆ ಸ್ವಚ್ಛತೆಯಾಗಿದೆ ಆದ್ದರಿಂದ ತಾವು ಬ್ರಾಹ್ಮಣ ಆತ್ಮರಿಗೆ ಪವಿತ್ರ ಹಂಸಗಳೆಂದು ಹೇಳಲಾಗುತ್ತದೆ ಅಂದಾಗ ಪರಿಶೀಲನೆ ಮಾಡಿಕೊಳ್ಳಿ- ನಾನು ಪವಿತ್ರ ಹಂಸ ಆತ್ಮನಿಗೆ ನಾಲ್ಕೂ ಮಾತುಗಳಲ್ಲಿ ಅರ್ಥಾತ್ ತನು-ಮನ-ಹೃದಯ ಮತ್ತು ಸಂಬಂಧದಲ್ಲಿ ಸ್ವಚ್ಛತೆಯಿದೆಯೇ? ಸಂಪೂರ್ಣ ಸ್ವಚ್ಛತೆ ಅಥವಾ ಪವಿತ್ರತೆ ಇದೆಯೇ? ಇದೇ ಈ ಸಂಗಮಯುಗದಲ್ಲಿ ಎಲ್ಲರ ಲಕ್ಷ್ಯ ವಾಗಿದೆ ಆದ್ದರಿಂದಲೇ ತಾವು ಬ್ರಾಹ್ಮಣರು ಸೋ ದೇವತೆಗಳನ್ನು ಸಂಪೂರ್ಣ ಪವಿತ್ರರೆಂದು ಗಾಯನ ಮಾಡಲಾಗುತ್ತದೆ. ಕೇವಲ ನಿರ್ವಿಕಾರಿಗಳೆಂದು ಹೇಳುವುದಿಲ್ಲ ಆದರೆ ಸಂಪೂರ್ಣ ನಿರ್ವಿಕಾರಿಗಳೆಂದು ಹೇಳಲಾಗುತ್ತದೆ. 16 ಕಲಾ ಸಂಪನ್ನ ಎಂದು ಹೇಳಲಾಗುತ್ತದೆ. ಕೇವಲ 16 ಕಲೆಗಳಲ್ಲ ಆದರೆ ಅದರಲ್ಲಿ ಸಂಪನ್ನರು. ತಮ್ಮದೇ ದೇವತಾ ರೂಪದ ಗಾಯನವಿದೆ ಆದರೆ ಯಾವಾಗ ಆಗಿದ್ದಿರಿ? ಬ್ರಾಹ್ಮಣ ಜೀವನದಲ್ಲಿಯೋ ಅಥವಾ ದೇವತಾ ಜೀವನದಲ್ಲಿಯೋ? ಆಗುವ ಸಮಯವು ಈ ಸಂಗಮಯುಗವಾಗಿದೆ ಆದ್ದರಿಂದ ಎಲ್ಲಿಯವರೆಗೆ ಎಷ್ಟು ಪರ್ಸೆಂಟ್‌ನಲ್ಲಿ ಸ್ವಚ್ಛತೆ ಅಂದರೆ ಪವಿತ್ರತೆಯನ್ನು ಧಾರಣೆ ಮಾಡಿಕೊಂಡಿದ್ದೇನೆ?  ಎಂದು ಪರಿಶೀಲನೆ ಮಾಡಿಕೊಳ್ಳಿರಿ.

ತನುವಿನ ಸ್ವಚ್ಛತೆ ಅರ್ಥಾತ್ ಸದಾ ಈ ತನುವನ್ನು ಅತ್ಮನ ಮಂದಿರವೆಂದು ತಿಳಿದು ಈ ಸ್ಮೃತಿಯಿಂದ ಸ್ವಚ್ಛವಾಗಿಟ್ಟುಕೊಳ್ಳುವುದು, ಮೂರ್ತಿಯು ಎಷ್ಟು ಶ್ರೇಷ್ಠವಾಗಿರುತ್ತದೆಯೋ ಮಂದಿರವೂ ಅಷ್ಟೇ ಶ್ರೇಷ್ಠವಾಗಿರುತ್ತದೆ ಅಂದಾಗ ತಾವು ಶ್ರೇಷ್ಠ ಮೂರ್ತಿಗಳಾಗಿದ್ದೀರೋ ಅಥವಾ ಸಾಧಾರಣರೋ? ಬ್ರಾಹ್ಮಣ ಅತ್ಮರೆಂದರೆ ಇಡೀ ಕಲ್ಪದಲ್ಲಿ ನಂಬರ್‌ವನ್ ಶ್ರೇಷ್ಠಾತ್ಮರು! ಬ್ರಾಹ್ಮಣರ ಮುಂದೆ ದೇವತೆಗಳೂ ಸಹ ಚಿನ್ನದ ಸಮಾನರಾಗಿದ್ದಾರೆ ಮತ್ತು ಬ್ರಾಹ್ಮಣರು ವಜ್ರಸಮಾನರಾಗಿದ್ದೀರಿ! ಅಂದಾಗ ತಾವೆಲ್ಲರೂ ವಜ್ರದ ಮೂರ್ತಿಗಳಾಗಿದ್ದೀರಿ. ತಮ್ಮದು ಎಷ್ಟು ಶ್ರೇಷ್ಠತೆಯಾಯಿತು! ಇಷ್ಟೊಂದು ತಮ್ಮ ಸ್ವಮಾನವನ್ನು ಅರಿತು ಈ ಶರೀರರೂಪಿ ಮಂದಿರವನ್ನು ಸ್ವಚ್ಛವಾಗಿಟ್ಟುಕೊಳ್ಳಿ. ಸಾಧಾರಣವಾಗಿರಿ ಆದರೆ ಸ್ವಚ್ಛವಾಗಿರಿ. ಈ ವಿಧಿಯಿಂದ ತನುವಿನ ಪವಿತ್ರತೆಯು ಸದಾ ಆತ್ಮೀಕ ಸುಗಂಧದ ಅನುಭವ ಮಾಡಿಸುವುದು. ಇಂತಹ ಸ್ವಚ್ಛತೆ. ಪವಿತ್ರತೆಯು ಎಲ್ಲಿಯವರೆಗೆ ಧಾರಣೆಯಾಗಿದೆ? ದೇಹಭಾನದಲ್ಲಿ ಸ್ವಚ್ಛತೆಯಿರುವುದಿಲ್ಲ. ಆದರೆ ಆತ್ಮದ ಮಂದಿರವೆಂದು ತಿಳಿಯುವುದರಿಂದ ಸ್ವಚ್ಛವಾಗಿಟ್ಟುಕೊಳ್ಳುತ್ತೀರಿ ಮತ್ತು ಈ ಮಂದಿರವನ್ನೂ ಸಹ ತಂದೆಯು ನಿಮಗೆ ಸಂಚಾಲನೆ ಮಾಡುವುದಕ್ಕಾಗಿ ಮತ್ತು ನಡೆಸುವುದಕ್ಕಾಗಿ ಕೊಟ್ಟಿದ್ದಾರೆ. ಈ ಮಂದಿರದ ಟ್ರಸ್ಟಿಯನ್ನಾಗಿ ಮಾಡಿದ್ದಾರೆ. ತಾವಂತೂ ತನು, ಮನ, ಧನ ಎಲ್ಲವನ್ನೂ ಕೊಟ್ಟುಬಿಟ್ಟಿದ್ದೀರಲ್ಲವೆ. ಈಗ ತಮ್ಮದಂತೂ ಅಲ್ಲ. ನಿಮ್ಮದೆಂದು ಹೇಳುತ್ತೀರೋ ಅಥವಾ ನನ್ನದೆಂದು ಹೇಳುತ್ತೀರೋ? ಅಂದಮೇಲೆ ಟ್ರಸ್ಟಿತನವು ಸ್ವತಹವಾಗಿಯೇ ನಷ್ಟಮೋಹ ಅರ್ಥಾತ್ ತನ್ನಲ್ಲಿ ಸ್ವಚ್ಛತೆ ಮತ್ತು ಪವಿತ್ರತೆಯನ್ನು ತರುತ್ತದೆ. ಮೋಹದಿಂದ ಸ್ವಚ್ಛತೆಯಲ್ಲ ಆದರೆ ತಂದೆಯು ಸೇವೆಯನ್ನು ನೀಡಿದ್ದಾರೆ ಎಂದು ತಿಳಿದು ತನುವನ್ನು ಸ್ವಚ್ಛ, ಪವಿತ್ರವಾಗಿ ಇಟ್ಟುಕೊಳ್ಳುತ್ತೀರಲ್ಲವೆ ಅಥವಾ ಹೇಗೆ ಬಂದರೆ ಹಾಗೆ ನಡೆಸುತ್ತಾ ಇರುತ್ತೀರೋ? ಸ್ವಚ್ಛತೆಯೂ ಸಹ ಆತ್ಮೀಯತೆಯ ಸಂಕೇತವಾಗಿದೆ.

ಹಾಗೆಯೇ ಮನಸ್ಸಿನ ಸ್ವಚ್ಛತೆ ಅಥವಾ ಪವಿತ್ರತೆ. ಇದರಲ್ಲಿಯೂ ಪರ್ಸೆಂಟೇಜ್ ನೋಡಿಕೊಳ್ಳಿ. ಇಡೀ ದಿನದಲ್ಲಿ ಯಾವುದೇ ಪ್ರಕಾರದ ಅಶುದ್ಧ ಸಂಕಲ್ಪವು ಮನಸ್ಸಿನಲ್ಲಿ ನಡೆದರೆ ಇದಕ್ಕೆ ಸಂಪೂರ್ಣ ಸ್ವಚ್ಛತೆಯೆಂದು ಹೇಳುವುದಿಲ್ಲ. ಮನಸ್ಸಿನ ಪ್ರತಿ ಬಾಪ್‌ದಾದಾರವರ ಆದೇಶವಾಗಿದೆ- ಮನಸ್ಸನ್ನು ನನ್ನ ಮೇಲಿಡಿ ಹಾಗೂ ವಿಶ್ವ ಸೇವೆಯಲ್ಲಿ ತೊಡಗಿಸಿರಿ, ಮನ್ಮನಾಭವ(ಮನ್-ನಿಮ್ಮ ಮನಸ್ಸು ಅರ್ಥಾತ್ ಆಲೋಚನೆಗಳು, ಮನಾ-ನನ್ನ ಅರ್ಥಾತ್ ಶಿವಪರಮಾತ್ಮನ ಮೇಲೆ, ಭವ-ಸ್ಥಿರಪಡಿಸಿರಿ)- ಸದಾ ಈ ಮಂತ್ರದ ಸ್ಮೃತಿಯಿರಲಿ ಇದಕ್ಕೆ ಮನಸ್ಸಿನ ಸ್ವಚ್ಛತೆ ಅಥವಾ ಪವಿತ್ರತೆಯೆಂದು ಹೇಳಲಾಗುತ್ತದೆ. ಮತ್ತೆಲ್ಲಿಯಾದರೂ ಮನಸ್ಸು ಅಲೆಯುತ್ತಿದ್ದರೆ ಅಲೆದಾಟ ಅರ್ಥಾತ್ ಅಸ್ವಚ್ಛತೆ, ಈ ವಿಧಿಯಿಂದ ಪರಿಶೀಲನೆ ಮಾಡಿಕೊಳ್ಳಿ- ಎಷ್ಟು ಪರ್ಸೆಂಟ್‌ನಲ್ಲಿ ಸ್ವಚ್ಛತೆಯು ಧಾರಣೆಯಾಯಿತು! ವಿಸ್ತಾರವನ್ನಂತೂ ತಿಳಿದುಕೊಂಡಿದ್ದೀರಲ್ಲವೆ.

ಮೂರನೆಯ ಮಾತು ಹೃದಯದ ಸ್ವಚ್ಛತೆ. ಇದನ್ನೂ ಸಹ ತಿಳಿದುಕೊಂಡಿದ್ದೀರಿ, ಸತ್ಯತೆಯೇ ಸ್ವಚ್ಛತೆಯಾಗಿದೆ. ತಮ್ಮ ಸ್ವ-ಉನ್ನತಿಯ ಸಲುವಾಗಿ ಏನೆಲ್ಲಾ ಪುರುಷಾರ್ಥವಿದೆಯೋ, ಯಾವ ಪುರುಷಾರ್ಥವಿದೆಯೋ ಅದನ್ನು ಸತ್ಯತೆಯಿಂದ ತಂದೆಯ ಮುಂದೆ ಇಡುವುದು. ಅಂದಾಗ ಒಂದು ಸ್ವಯಂನ ಪುರುಷಾರ್ಥದ ಸ್ವಚ್ಛತೆಯಾಗಿದೆ, ಇನ್ನೊಂದು ಸೇವೆ ಮಾಡುತ್ತಾ ಸತ್ಯಹೃದಯದಿಂದ ಎಲ್ಲಯವರೆಗೆ ಸೇವೆ ಮಾಡುತ್ತಿದ್ದೇವೆ ಎಂಬುದರ ಸ್ವಚ್ಛತೆ. ಒಂದುವೇಳೆ ಸ್ವಾರ್ಥದಿಂದ ಸೇವೆ ಮಾಡಿದರೆ ಅದಕ್ಕೆ ಸತ್ಯಸೇವೆಯೆಂದು ಹೇಳಲಾಗುವುದಿಲ್ಲ. ಅಂದಮೇಲೆ ಸೇವೆಯಲ್ಲಿ ಸತ್ಯತೆ, ಸ್ವಚ್ಛತೆ ಎಷ್ಟಿದೆ? ಕೆಲಕೆಲವರು ಆಲೋಚಿಸುತ್ತಾರೆ- ಸೇವೆಯನ್ನಂತೂ ಮಾಡಲೇಬೇಕಾಗುವುದು. ಹೇಗೆ ಸರ್ಕಾರಿ ನೌಕರಿಯಿದೆ ಅದನ್ನು ಸತ್ಯಹೃದಯದಿಂದಾದರೂ ಮಾಡಿರಿ, ಬಲವಂತವಾಗಿಯಾದರೂ ಮಾಡಿರಿ, ಹುಡುಗಾಟಿಕೆಯಿಂದಾದರೂ ಮಾಡಿರಿ. ಮಾಡಬೇಕಾಗುತ್ತದೆಯಲ್ಲವೆ. ಹೇಗಾದರೂ 8 ಗಂಟೆಗಳನ್ನು ಕಳೆಯಬೇಕಾಗುತ್ತದೆ. ಹಾಗೆಯೇ ಈ ಆಲ್‌ಮೈಟಿ ಸರ್ಕಾರದ ಮೂಲಕ ಡ್ಯೂಟಿ ಸಿಕ್ಕಿದೆ ಎಂದು ತಿಳಿದು ಸೇವೆ ಮಾಡುವುದಕ್ಕೆ ಸತ್ಯಸೇವೆಯೆಂದು ಹೇಳಲಾಗುವುದಿಲ್ಲ. ಕೇವಲ ಡ್ಯುಟಿಯಲ್ಲ ಆದರೆ ಬ್ರಾಹ್ಮಣ ಆತ್ಮರ ನಿಜ ಸಂಸ್ಕಾರವೇ ಸೇವೆಯಾಗಿದೆ ಅಂದಾಗ ಸಂಸ್ಕಾರವು ಸ್ವತಹವಾಗಿ ಸೇವೆಯಿಲ್ಲದೇ ಬಿಡುವುದಿಲ್ಲ ಅಂದಮೇಲೆ ಪರಿಶೀಲನೆ ಮಾಡಿಕೊಳ್ಳಿ- ಸತ್ಯಹೃದಯದಿಂದ ಅರ್ಥಾತ್ ಬ್ರಾಹ್ಮಣ ಜೀವನದ ಸ್ವತಹ ಸಂಸ್ಕಾರದಿಂದ ಎಷ್ಟು ಪರ್ಸೆಂಟ್ ಸೇವೆ ಮಾಡಿದಿರಿ? ಇಷ್ಟೊಂದು ಮೇಳಗಳನ್ನು ಮಾಡಿದಿರಿ, ಇಷ್ಟೊಂದು ಕೋರ್ಸ್‌ಗಳನ್ನು

ಮಾಡಿಸಿದಿರಿ ಆದರೆ ಸ್ವಚ್ಛತೆ ಮತ್ತು ಪವಿತ್ರತೆಯ ಪರ್ಸೆಂಟೇಜ್ ಎಷ್ಟು ಉಳಿಯಿತು? ಕೇವಲ ಡ್ಯುಟಿಯಲ್ಲ. ಇದು ನಿಜ ಸಂಸ್ಕಾರವಾಗಿದೆ. ಸ್ವಧರ್ಮ- ಸ್ವಕರ್ಮವಾಗಿದೆ.

ನಾಲ್ಕನೆಯ ಮಾತು ಸಂಬಂಧದಲ್ಲಿ ಸ್ವಚ್ಛತೆ. ಇದರ ಸಾರ ರೂಪದಲ್ಲಿ ವಿಶೇಷವಾಗಿ ಇದನ್ನೇ ಪರಿಶೀಲನೆ ಮಾಡಿಕೊಳ್ಳಿ - ಸಂತುಷ್ಟತಾರೂಪಿ ಸ್ವಚ್ಛತೆಯು ಎಷ್ಟು ಪರ್ಸೆಂಟ್‌ನಲ್ಲಿದೆ? ಇಡೀ ದಿನದಲ್ಲಿ ಭಿನ್ನ-ಭಿನ್ನ ಆತ್ಮರೊಂದಿಗೆ ಸಂಬಂಧವಿರುತ್ತದೆ. ಮೂರು ಪ್ರಕಾರದ ಸಂಬಂಧಗಳಲ್ಲಿ ಬರುತ್ತೀರಿ- ಒಂದು ಬ್ರಾಹ್ಮಣ ಪರಿವಾರ, ಇನ್ನೊಂದು ಬಂದಿರುವ ಸಂಪರ್ಕದಲ್ಲಿರುವ ಆತ್ಮರ ಸಂಬಂಧ ಬರುವಂತಹ ಜಿಜ್ಞಾಸುಗಳು, ಮೂರನೆಯರು ಲೌಕಿಕ ಪರಿವಾರದ ಸಂಬಂಧ. ಮೂರೂ ಸಂಬಂಧಗಳಲ್ಲಿ ಇಡೀ ದಿನದಲ್ಲಿ ಸ್ವಯಂನ ಸಂತುಷ್ಟತೆ ಮತ್ತು ಸಂಬಂಧದಲ್ಲಿ ಬರುವಂತಹ ಅನ್ಯಆತ್ಮರ ಸಂತುಷ್ಟತೆಯಲ್ಲಿ ಪರ್ಸೆಂಟೇಜ್ ಎಷ್ಟಿತ್ತು? ಸಂತುಷ್ಟತೆಯ ಚಿಹ್ನೆಯೇನೆಂದರೆ ಸ್ವಯಂ ಮನಸ್ಸಿನಿಂದ ಹಗುರ ಮತ್ತು ಖುಷಿಯಾಗಿರುತ್ತಾರೆ ಮತ್ತು ಅನ್ಯರೂ ಕೂಡಾ ಖುಷಿಪಡುತ್ತಾರೆ. ಅಸಂತುಷ್ಟತೆಯ ಚಿಹ್ನೆಯಾಗಿದೆ. ತಾನೂ ಮನಸ್ಸಿನಿಂದ ಭಾರಿಯಾಗಿರುತ್ತಾರೆ. ಒಂದುವೇಳೆ ಸತ್ಯ ಪುರುಷಾರ್ಥಿಗಳಾಗಿದ್ದರೆ ಪದೇ-ಪದೇ ಬಯಸದಿದ್ದರೂ ಈ ಸಂಕಲ್ಪ ಬರುತ್ತಾ ಇರುವುದು- ಈ ರೀತಿ ಹೇಳದಿದ್ದರೆ. ಈ ರೀತಿ ಮಾಡದಿದ್ದರೆ ಚೆನ್ನಾಗಿರುತ್ತಿತ್ತು. ಈ ರೀತಿ ಹೇಳಿದ್ದರೆ, ಮಾಡಿದ್ದರೆ..... ಎಂಬುದು ಬರುತ್ತಾ ಇರುವುದು, ಹುಡುಗಾಟಿಕೆಯ ಪುರುಷಾರ್ಥಿಗಳಿಗೆ ಈ ಸಂಕಲ್ಪವೂ ಬರುವುದಿಲ್ಲ ಅಂದಾಗ ಈ ಹೊರೆಯು ಖುಷಿಯಾಗಿರಲು ಬಿಡುವುದಿಲ್ಲ. ಹಗುರವಾಗಿರಲು ಬಿಡುವುದಿಲ್ಲ. ಸಂಬಂಧದ ಸ್ವಚ್ಛತೆ ಅರ್ಥಾತ್ ಸಂತುಷ್ಟತೆ. ಇದೇ ಸಂಬಂಧದ ಸ್ವಚ್ಛತೆ ಹಾಗೂ ಸತ್ಯತೆಯಾಗಿದೆ. ಆದ್ದರಿಂದ ತಾವು ಹೇಳುತ್ತೀರಿ "ಸತ್ಯ ಹೃದಯದವರು ನರ್ತಿಸುವರು" ಸತ್ಯ ಅರ್ಥಾತ್ ಸತ್ಯವಂತರು, ಸದಾ ಖುಷಿಯಲ್ಲಿ ನರ್ತಿಸುತ್ತಾ ಇರುವರು ಅಂದಾಗ ಹೋಲಿಹಂಸಗಳ ಪರಿಭಾಷೆಯನ್ನು ಕೇಳಿದಿರಾ? ಒಂದುವೇಳೆ ಸತ್ಯತೆಯ ಸ್ವಚ್ಛತೆಯು ಇಲ್ಲವೆಂದರೆ ಹಂಸವಾಗಿದ್ದೀರಿ ಆದರೆ ಹೋಲಿಹಂಸವಲ್ಲ ಅಂದಾಗ ಪರಿಶೀಲನೆ ಮಾಡಿಕೊಳ್ಳಿ- ಸಂಪನ್ನ ಮತ್ತು ಸಂಪೂರ್ಣತೆಯ ಯಾವ ಗಾಯನವಿದೆಯೋ ಅದು ಎಲ್ಲಿಯವರೆಗೆ ಆಗಿದ್ದೀರಿ? ಒಂದುವೇಳೆ ಡ್ರಾಮಾನುಸಾರ ಈ ದಿನವೇ ಈ ಶರೀರದ ಲೆಕ್ಕಾಚಾರವು ಸಮಾಪ್ತಿಯಾಗಿಬಿಟ್ಟರೆ ಎಷ್ಟು ಪರ್ಜೆಂಟ್‌ನಲ್ಲಿ ತೇರ್ಗಡೆಯಾಗುವಿರಿ ಅಥವಾ ಸ್ವಲ್ಪಸಮಯ ನಿಲ್ಲು ಎಂದು ಡ್ರಾಮಾಗೆ ಹೇಳುವಿರಾ? ಇದನ್ನೂ ಯೋಚಿಸುತ್ತಾ ಕುಳಿತುಕೊಳ್ಳಬೇಡಿ- ಚಿಕ್ಕ-ಚಿಕ್ಕವರಂತೂ ಈಗಲೇ ಹೋಗುವುದಿಲ್ಲವಲ್ಲ ಎಂದು. ಎವರೆಡಿಯ ಅರ್ಥವೇನಾಗಿದೆ? ಸಮಯದ ನಿರೀಕ್ಷಣೆ ಮಾಡುವುದಲ್ಲ ತಾನೆ?- ಇನ್ನೂ 10-11 ವರ್ಷಗಳಿದೆ ಎಂದು. ಅನೇಕರು 2000ದ ಲೆಕ್ಕವನ್ನು ಯೋಚಿಸುತ್ತಾರೆ ಆದರೆ ಸೃಷ್ಟಿಯ ವಿನಾಶದ ಮಾತೇ ಬೇರೆಯಾಗಿದೆ, ತಮ್ಮನ್ನು ಎವರೆಡಿಯಾಗಿ ಇಟ್ಟುಕೊಳ್ಳುವುದೇ ಬೇರೆ ಮಾತಾಗಿದೆ ಆದ್ದರಿಂದ ಇದನ್ನು ಅದರೊಂದಿಗೆ ಸೇರಿಸಬೇಡಿರಿ. ಭಿನ್ನ-ಭಿನ್ನ ಆತ್ಮರ ಭಿನ್ನ-ಭಿನ್ನ ಪಾತ್ರವಿದೆ ಆದ್ದರಿಂದ ನನ್ನದು ಅಡ್ವಾನ್ಸ್ ಪಾರ್ಟಿಯಲ್ಲಂತೂ ಪಾತ್ರವಿಲ್ಲ. ನನ್ನದು ವಿನಾಶದ ನಂತರವೇ ಪಾತ್ರವಿದೆ! ಯಾರದೇ ಪಾತ್ರವಿರಲಿ ಆದರೆ ನಾನುಎವರೆಡಿಯಾಗಿರಬೇಕಲ್ಲವೆ. ಇಲ್ಲವೆಂದರೆ ಹುಡುಗಾಟಿಕೆಯ ಅಂಶವು ಪ್ರಕಟವಾಗಿಬಿಡುವುದು. ಎವರೆಡಿಯಾಗಿರಿ ನಂತರ 20 ವರ್ಷಗಳಾದರೂ ಜೀವಿಸಿರಿ, ಪರವಾಗಿಲ್ಲ ಆದರೆ ಇಂತಹ ಆಧಾರದ ಮೇಲೆ ಇರಬಾರದು. ಇಂತಹವರಿಗೆ ಹೋಲಿಹಂಸಗಳೆಂದು ಹೇಳಲಾಗುತ್ತದೆ. ಜ್ಞಾನಸಾಗರನ ತೀರಕ್ಕೆ ಬಂದಿದ್ದೀರಲ್ಲವೆ ಅಂದಾಗ ಪವಿತ್ರ ಹಂಸಗಳ ಸ್ವಚ್ಛತೆಯನ್ನು ಇಂದು ತಿಳಿಸಿದೆವು. ವಿಶೇಷತೆಯನ್ನು ಮತ್ತೆಂದಾದರೂ ತಿಳಿಸುತ್ತೇವೆ.

ಶಿಕ್ಷಕಿ ಸಹೋದರಿಯರಿಗೆ ಪರಿಶೀಲನೆ ಮಾಡಿಕೊಳ್ಳುವುದು ಬರುತ್ತದೆಯಲ್ಲವೆ. ಶಿಕ್ಷಕಿಯರಿಗೆ ವಿಶೇಷವಾಗಿ ಸಮರ್ಪಿತರಾಗುವ ಭಾಗ್ಯವು ಸಿಕ್ಕಿದೆ. ಭಲೆ ಪ್ರವೃತ್ತಿಯವರೂ ಸಹ ಮನಸ್ಸಿನಿಂದ ಸಮರ್ಪಿತರಾಗಿದ್ದಾರೆ ಆದರೂ ಸಹ ಶಿಕ್ಷಕಿಯರದು ವಿಶೇಷ ಪಾತ್ರವಿದೆ. ಕೆಲಸವೇ ಆಗಿದೆ- ನೆನಪು ಮತ್ತು ಸೇವೆ. ಭಲೆ ಅಡಿಗೆ ಮಾಡುತ್ತೀರೋ, ಬಟ್ಟೆಗಳನ್ನು ಒಗೆಯುತ್ತೀರೋ ಅದೂ ಸಹ ಯಜ್ಞ ಸೇವೆಯಾಗಿದೆ. ಅದೂ ಸಹ ಅಲೌಕಿಕ ಜೀವನದ ಪ್ರತಿ ಸೇವೆ ಮಾಡುತ್ತೀರಿ. ಪ್ರವೃತ್ತಿ ಮಾರ್ಗದವರಿಗೆ ಎರಡೂಕಡೆ ನಿಭಾಯಿಸಬೇಕಾಗುತ್ತದೆ. ತಮಗಂತೂ ಒಂದೇ ಕೆಲಸವಲ್ಲವೆ. ಡಬಲ್ ಇಲ್ಲ. ಯಾರು ಸತ್ಯತೆ ಮತ್ತು ಸ್ವಚ್ಛತೆಯಿಂದ ತಂದೆ ಮತ್ತು ಸೇವೆಯಲ್ಲಿ ಸದಾ ತೊಡಗಿರುವರೋ ಅವರಿಗೆ ಮತ್ತಾವುದೇ ಪರಿಶ್ರಮ ಪಡುವ ಅವಶ್ಯಕತೆಯಿರುವುದಿಲ್ಲ. ತಿಳಿಸಿದ್ದೆವಲ್ಲವೆ- ಯೋಗ್ಯ

ಶಿಕ್ಷಕಿಯರ ಭಂಡಾರ ಮತ್ತು ಭಂಡಾರಿಯೂ ಸಹ ಸಂಪನ್ನವಾಗಿರುವುದು. ಮುಂದಿನ ತಿಂಗಳು ಹೇಗೆ ನಡೆಯುವುದು, ಮೇಳವು ಹೇಗೆ ಆಗುತ್ತದೆ ಎಂದು ಚಿಂತೆ ಮಾಡಬೇಕಾಗುವುದಿಲ್ಲ. ಸೇವೆಯ ಜೊತೆಜೊತೆಗೆ ಸಾಧನಗಳು ಸ್ವತಹವಾಗಿ ಪ್ರಾಪ್ತಿಯಾಗುತ್ತವೆ. ಆತ್ಮಿಕ ಆಕರ್ಷಣೆಯು ಸೇವೆ ಮತ್ತು ಸೇವಾಕೇಂದ್ರವನ್ನು ಸ್ವತಹ ಮುಂದುವರೆಸುತ್ತಾ ಇರುತ್ತದೆ. ಹೊಸಬರು ಏಕೆ ಬರುತ್ತಿಲ್ಲ? ಏಕೆ ನಿಲ್ಲುತ್ತಿಲ್ಲ. ಏಳಿ ಸ್ವಲ್ಪಕೇಳಿ ಹೊರಟುಹೋಗುತ್ತಾರೆ .ಎಂದು ಯಾವಾಗ ಹೆಚ್ಚು ಯೋಚಿಸುತ್ತೀರೋ- ಆಗ "ಜಿಜ್ಞಾಸುಗಳು ನಿಲ್ಲುವುದಿಲ್ಲ. ಯೋಗಯುಕ್ತರಾಗಿ ಆತ್ಮೀಯತೆಯಿಂದ ಆಹ್ವಾನ ಮಾಡಿದಾಗ ಸ್ವತಹವಾಗಿಯೇ ವೃದ್ಧಿಯಾಗುತ್ತದೆ. ಈ ರೀತಿ ಆಗುತ್ತದೆಯಲ್ಲವೆ. ಹಾಗಾದರೆ ಮನಸ್ಸನ್ನು ಸದಾ ಹಗುರವಾಗಿಟ್ಟುಕೊಳ್ಳಿ. ಯಾವುದೇ ಪ್ರಕಾರದ ಹೊರೆ ಇರಬಾರದು. ಯಾವುದೇ ಪ್ರಕಾರದ ಹೊರೆ ಅರ್ಥಾಥ್ ಸೇವೆಯದಿರಬಹುದು, ತನ್ನದಿರಬಹುದು, ಸೇವೆಯ ಜೊತೆಗಾರರದೂ ಇರಬಹುದು, ಅದು ಹಾರಲು ಬಿಡುವುದಿಲ್ಲ. ಸೇವೆಯ ಉನ್ನತಿಯೂ ಆಗುವುದಿಲ್ಲ. ಆದ್ದರಿಂದ ಸದಾ ಹೃದಯ ಸ್ವಚ್ಛವಾಗಿರಲಿ ಮತ್ತು ಕಾಮನೆಗಳು ಈಡೇರುತ್ತಾ ಇರಲಿ. ಪ್ರಾಪ್ತಿಗಳು ಸ್ವತಹ ತಮ್ಮ ಮುಂದೆ ಬರುವವು. ಏನನ್ನು ಕೇಳಿದಿರಿ? ಸರ್ವಆತ್ಮಿಕ ಪ್ರಾಪ್ತಿಗಳರುವುದೇ ಬ್ರಾಹ್ಮಣರಿಗಾಗಿ ಅಂದಾಗ ಮತ್ತೆಲ್ಲಿಗೆ ಹೋಗುತ್ತವೆ. ಅಧಿಕಾರವೇ ತಮ್ಮದಾಗಿದೆ. ಅಧಿಕಾರವನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಒಳ್ಳೆಯದು.

**ಸರ್ವ ಹೋಲಿಹಂಸಗಳಿಗೆ, ನಾಲ್ಕಾರು ಕಡೆಯ ಸತ್ಯಸಾಹೇಬನನ್ನು ರಾಜಿಪಡಿಸುವಂತಹ ಸತ್ಯಹೃದಯದ ಶ್ರೇಷ್ಠಾತ್ಮರಿಗೆ, ಸದಾ ಸ್ವಯಂನ್ನು ಎವರೆಡಿಯಾಗಿಟ್ಟುಕೊಳ್ಳುವ ನಂಬರ್‌ವನ್ ಮಕ್ಕಳಿಗೆ ಸದಾ ತಮ್ಮನ್ನು ಗಾಯನಯೋಗ್ಯ. ಸಂಪೂರ್ಣ ಮತ್ತು ಸಂಪನ್ನರನ್ನಾಗಿ ಮಾಡಿಕೊಳ್ಳುವಂತಹ ತಂದೆಯ ಸಮೀಪ ಮಕ್ಕಳಿಗೆ, ಸದಾ ತಮ್ಮನ್ನು ಅಮೂಲ್ಯ ವಜ್ರಸಮಾನ ಅನುಭವ ಮಾಡುವಂತಹ ಅನುಭವಿ ಆತ್ಮರಿಗೆ ಬಾಪ್ ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಮಹಾರಾಷ್ಟ್ರ ಗ್ರೂಪ್‌ನೊಂದಿಗೆ ಅವ್ಯಕ್ತ ಬಾಪ್‌ದಾದಾರವರ ವಾರ್ತಾಲಾಪ:**

ಸದಾ ಖುಷಿಯಾಗಿ ಇರುತ್ತೀರಾ? ಖುಷಿಯಾಗಿರುವುದು ಅರ್ಥಾತ್ ಸಂಪನ್ನರಾಗಿರುವುದು. ಹೀಗಿರುವವರು ಸ್ವಯಂಗೂ ಪ್ರಿಯ ಹಾಗೂ ಅನ್ಯರಿಗೂ ಪ್ರಿಯವಾಗುತ್ತಾರೆ. ಎಲ್ಲಿ ಖುಷಿಯಿಲ್ಲವೋ ಅದಕ್ಕೆ ಮುಳ್ಳಿನ ಕಾಡು ಎಂದು ಹೇಳಲಾಗುತ್ತದೆ. ಅಂದಮೇಲೆ ತಮ್ಮೆಲ್ಲರ ಜೀವನವು ಸಂಪನ್ನವಾಗಿಬಿಟ್ಟಿದೆ. ಹಾಗೂ ಚಲನೆಯು ಹೇಗಾಗಿದೆ? ಹಾರುವ ಕಲೆಯ ಪರಿಶ್ತೆಗಳ ಚಲನೆಯಾಗಿದೆ. ಅಂದಮೇಲೆ ಚಲನೆಯೂ ಒಳ್ಳೆಯದಿದೆ ಹಾಗೂ ವಲನೆಯೂ ಒಳ್ಳೆಯದಿದೆ. ಪ್ರಪಂಚದವರು ಭೇಟಿಯಾಗುತ್ತಾರೆಂದರೆ ತಾವು ಹೇಗಿದ್ದೀರಿ? ಎಂದು ಕ್ಷೇಮಸಮಾಚಾರ ಕೇಳುತ್ತಾರಲ್ಲವೆ! ಚಲನೆಯು ಫರಿಶ್ತೆಗಳಂತೆ, ವಲನೆಯು ಸಂಪನ್ನವಾಗಿರುವುದಾಗಿದೆ. ಎರಡೂ ಚೆನ್ನಾಗಿವೆ ಅಲ್ಲವೆ? ಸಂಪನ್ನತೆಯಲ್ಲಿ ಯಾವುದೇ ಮುಳ್ಳು ಬರುವುದಿಲ್ಲ. ಮುಂಚೆ ಜೀವನವೇ ಮುಳ್ಳಿನ ಕಾಡಿನಲ್ಲಿತ್ತು. ಈಗ ಬದಲಾಗಿ ಹೂಗಳ ಸಂಪನ್ನತೆ(ಹಚ್ಚಹಸಿರು)ಯಲ್ಲಿ ಬಂದುಬಿಟ್ಟಿದೆ. ಜೀವನದಲ್ಲಿ ಸದಾ ದಿವ್ಯಗುಣಗಳ ಹೂಗಳ ಹೂಗುಚ್ಛವಾಗಿದೆ. ದಿವ್ಯಗುಣಗಳ ಹೂಗುಚ್ಛದ ಚಿತ್ರವನ್ನು ಮಾಡುತ್ತಾರಲ್ಲವೆ, ಅದು ಯಾವುದು? ತಮ್ಮದಲ್ಲವೆ ಅಥವಾ ಅನ್ಯರದೇ? ಮುಳ್ಳುಗಳೆಂದಿಗೂ ಹೂಗುಚ್ಛವಾಗುವುದಿಲ್ಲ, ಹೂಗಳದೇ ಹೂಗುಚ್ಛವಾಗುವುದು. ಕೇವಲ ಎಲೆಗಳಷ್ಟೇ ಇದ್ದರೂ ಹೂಗುಚ್ಛವು ಸರಿಯೆಸುವುದಿಲ್ಲ. ಅಂದಮೇಲೆ ತಾವು ತಮ್ಮ ದಿವ್ಯಗುಣಗಳ ಹೂಗುಚ್ಛ ಅರ್ಥಾತ್ ಸಂಪನ್ನವಾಗಿದ್ದೀರಿ. ತಮ್ಮ ಸಂಪರ್ಕದಲ್ಲಿ ಯಾರೇ ಬರುತ್ತಾರೆಂದರೆ. ಅವರಿಗೆ ದಿವ್ಯಗುಣಗಳ ಹೂಗಳ ಸುಗಂಧವು ಬರುತ್ತಿರುತ್ತದೆ ಹಾಗೂ ಸಂಪನ್ನವಾಗಿರುವುದನ್ನು ನೋಡಿ ಖುಷಿಯಾಗುತ್ತಾರೆ. ಶಕ್ತಿಯ ಅನುಭವ ಮಾಡುತ್ತಾರೆ ಆದ್ದರಿಂದ ವರ್ತಮಾನದ ವೈದ್ಯರು ಸಹ ಹೇಳುತ್ತಾರೆ- ಉದ್ಯಾನವನದಲ್ಲಿ ಹೋಗಿ ನಡೆದಾಡಿರಿ. ಅಂದರೆ ಸಂಪನ್ನತೆಯು ಅನ್ಯರನ್ನೂ ಶಕ್ತಿಶಾಲಿಯನ್ನಾಗಿ ಮಾಡುತ್ತದೆ ಹಾಗೂ ಖುಷಿಯಲ್ಲಿಯೂ ಕರೆತರುತ್ತದೆ ಆದ್ದರಿಂದ ತಾವು ಹೇಳುತ್ತೀರಿ- ನಾವು ಎವರ್‌ಹ್ಯಾಪಿ ಆಗಿದ್ದೇವೆ. ಚಾಲೆಂಜ್ ಸಹ ಮಾಡುತ್ತೀರಿ- ಒಂದುವೇಳೆ ಯಾರನ್ನಾದರೂ ಎವರ್ ಹ್ಯಾಪಿ ಆಗಬೇಕೆಂದರೆ ನಮ್ಮ ಬಳಿ ಬನ್ನಿರಿ ತಾವು ಎಲ್ಲರಿಗೂ ತಂದೆಯ ಸ್ಮೃತಿ ತರಿಸುತ್ತೀರೆಂದರೆ ಎವರ್‌ಹೆಲ್ದೀ, ಎವರ್‌ವೆಲ್ದೀ ಹಾಗೂ ಎವರ್ ಹ್ಯಾಪಿ- ಇದು ತಮ್ಮ

ಜನ್ಮಸಿದ್ಧ ಅಧಿಕಾರವಾಗಿದೆ. ತಮಗೆ ಈ ಅಧಿಕಾರವಂತು ಸಿಕ್ಕಿದೆಯಲ್ಲವೆ? ಎಲ್ಲರಿಗೂ ಹೇಳುತ್ತೀರಿ- ಜನ್ಮ ಸಿದ್ಧ ಅಧಿಕಾರವಿದೆ, ಭಲೆ ಶರೀರವು ರೋಗಿಯಾಗಿದ್ದರೂ ಮನಸ್ಸು ಆರೋಗ್ಯದಿಂದ ಕೂಡಿದೆಯಲ್ಲವೆ.

ಮನಸ್ಸು ಖುಷಿಯಾಗಿದೆ ಎಂದರೆ ಪ್ರಪಂಚವೇ ಖುಷ್ ಹಾಗೂ ಮನಸ್ಸು ರೋಗಿಯಾಯಿತೆಂದರೆ ಶರೀರವು ಸಪ್ಪೆಯಾಗುವುದು ಮನಸ್ಸು ಸರಿಯಿದ್ದರೆ ರೋಗದ ಅನುಭೂತಿಯಾಗುವುದಿಲ್ಲ. ಈ ರೀತಿ ಆಗುವುದಲ್ಲವೆ! ಏಕೆಂದರೆ ತಮ್ಮಬಳಿ ಖುಷಿಯ ಬಹಳ ಶ್ರೇಷ್ಠವಾದ ಔಷಧಿಯಿದೆ. ಒಳ್ಳೆಯ ಔಷಧಿಯದ್ದರೆ ರೋಗವು ಓಡಿಹೋಗುವುದು. ತಮ್ಮಬಳಿ ಯಾವ ಖುಷಿಯ ಔಷಧಿಯಿದೆಯೋ ಅದು ರೋಗವನ್ನೂ ಓಡಿಸಿಬಿಡುತ್ತದೆ. ಮರೆಸಿಬಿಡುತ್ತದೆ. ಅಂದಮೇಲೆ ಮನಸ್ಸೂ ಖುಷ್, ಪ್ರಪಂಚವೂ ಖುಷ್. ಜೀವನವೂ ಖುಷ್ ಆದ್ದರಿಂದ ಎವರ್ ಹೆಲ್ದೀಯೂ ಹೌದು, ವೆಲ್ದೀಯೂ ಆಗಿದ್ದೀರಿ. ಹಾಗೂ ಸಂತೋಷದಿಂದಲೂ ಇದ್ದೀರಿ. ತಾವು ಯಾವಾಗ ಆ ರೀತಿ ಇರುತ್ತೀರೋ ಆಗಲೇ ಅನ್ಯರಿಗೂ ಚಾಲೆಂಜ್ ಮಾಡಬಹುದು. ಇಲ್ಲದಿದ್ದರೆ ಚಾಲೆಂಜ್ ಮಾಡಲು ಸಾಧ್ಯವಿಲ್ಲ ತಮ್ಮನ್ನು ನೋಡಿ ಅನ್ಯರ ಮೇಲೂ ದಯೆ ಬರುತ್ತದೆ ಏಕೆಂದರೆ ತಮ್ಮದೇ ಪರಿವಾರವಲ್ಲವೆ! ಭಲೆ ಆತ್ಮರು ಹೇಗಾದರೂ ಇರಲಿ ಆದರೆ ತಮ್ಮ ಪರಿವಾರವಲ್ಲವೆ. ಯಾರನ್ನೇ ನೋಡಿದಾಗ ತಮ್ಮ ಸಹೋದರರಂತೆ ಅನುಭೂತಿಯಾಗಲಿ- ಇವರು ನಮ್ಮ ಸಹೋದರರೇ. ನಮ್ಮ ಪರಿವಾರದವರೇ ಆಗಿದ್ದಾರೆ. ಪರಿವಾರದಲ್ಲಿಯೂ ಕೆಲವರು ಸಮೀಪವಿರುತ್ತಾರೆ, ಕೆಲವರು ದೂರದ ಸಂಬಂಧಿಯಾಗಿರುತ್ತಾರೆ, ಆದರೆ ಹೇಳುವುದಂತು ಪರಿವಾರದವರು ಎಂದು ಹೇಳುತ್ತೀರಲ್ಲವೆ?

ಹೇಗೆ ತಂದೆಯು ದಯಾಸಾಗರ ಆಗಿದ್ದಾರೆ ಆದ್ದರಿಂದ ತಂದೆಯಿಂದ ಇದನ್ನೇ ಬೇಡುತ್ತಾರೆ - ಕೃಪೆ ಮಾಡಿ, ದಯೆ ತೋರಿಸಿ! ಅಂದಮೇಲೆ ತಾವೂ ಕೃಪೆ ಹಾಗೂ ದಯೆ ತೋರುವಿರಲ್ಲವೆ ಏಕೆಂದರೆ ತಂದೆಯ ಸಮಾನ ಮಿತ್ತರಾಗಿದ್ದೀರಿ. ಬ್ರಾಹ್ಮಣ ಆತ್ಮರಿಗೆಂದಿಗೂ ಯವುದೇ ಆತ್ಮನಪ್ರತಿ ತಿರಸ್ಕಾರ ಬರಲು ಸಾಧ್ಯವಿಲ್ಲ. ದಯೆ ಬರುತ್ತದೆಯೇ ಹೊರತು ತಿರಸ್ಕಾರ' ಬರಲು ಸಾಧ್ಯವಿಲ್ಲ ಏಕೆಂದರೆ ಗೊತ್ತಿದೆ- ಯಾರಾದರೂ ಆಗಿರಲಿ. ಭಲೆ ಕಂಸ-ಜರಾಸಂಧನೇ ಆಗಿರಲಿ, ರಾವಣನೇ ಆಗಿರಲಿ ಆದರೆ ದಯಾಹೃದಯಿ ತಂದೆಯ ಮಕ್ಕಳು ತಿರಸ್ಕಾರ ಮಾಡುವುದಿಲ್ಲ. ಪರಿವರ್ತನೆಯ ಭಾವನೆಯನ್ನಿಡುವರು, ಕಲ್ಯಾಣದ ಭಾವನೆಯನ್ನಿಡುವರು. ಅದೆಲ್ಲದಕ್ಕಿಂತಲೂ ನಮ್ಮ ಪರಿವಾರದವರು ಆದರೆ ಪರವಶರಾಗಿದ್ದಾರೆ. ಅಂತಹವರ ಮೇಲೆ ಎಂದಿಗೂ ತಿರಸ್ಕಾರ ಬರುವುದಿಲ್ಲ. ಎಲ್ಲರೂ ಮಾಯೆಗೆ ವಶರಾಗಿದ್ದಾರೆ ಅಂದಾಗ ಪರವಶರಾದವರ ಮೇಲೆ ದಯೆ ಬರುತ್ತದೆ. ಎಲ್ಲಿ ತಿರಸ್ಕಾರ ಬರುವುದಿಲ್ಲವೋ ಅಲ್ಲಿ ಕ್ರೋಧವೂ ಬರುವುದಿಲ್ಲ. ಯಾವಾಗ ತಿರಸ್ಕಾರ ಬರುತ್ತದೆಯೋ ಆಗ ಆವೇಶ, ಕ್ರೋಧವೂ ಬರುತ್ತದೆ, ಎಲ್ಲಿ ದಯೆಯಿರುತ್ತದೆಯೋ ಅಲ್ಲಿ ಶಾಂತಿಯ ದಾನ ಕೊಡುವರು, ದಾತನ ಮಕ್ಕಳಲ್ಲವೆ! ಅಂದಾಗ ಕೊಡುವಿರಲ್ಲವೆ! ಒಳ್ಳೆಯದು-

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 06-01-1990.

***ಹೋಲಿ ಹಂಸಗಳ ಪರಿಭಾಷೆ.***

ಹೋಲಿ ಹಂಸ ಅರ್ಥಾತ್ ಸ್ವಚ್ಛತೆ ಮತ್ತು ವಿಶೇಷತೆಯುಳ್ಳ ಆತ್ಮರು ಸ್ವಚ್ಛತೆ ಅರ್ಥಾತ್ ಮನ-ವಚನ-ಕರ್ಮ, ಸಂಬಂಧ ಎಲ್ಲದರಲ್ಲಿ ಪವಿತ್ರತೆ , ಸತ್ಯ ಹೃದಯ ಎಂದರೆ ಸ್ವಚ್ಛತಾ ಸ್ವರೂಪರು, ತನು, ಮನ ಮತ್ತು ಹೃದಯದಿಂದ ಸದಾ ಕಲೆ ರಹಿತವಾಗಿರುವವರು. ಸ್ವಚ್ಛ ಮನಸ್ಸು ಹಾಗೂ ಸ್ವಚ್ಛ ಹೃದಯದವರ ಮೇಲೆ ಪ್ರಭು ಪ್ರಸನ್ನರಾಗುತ್ತಾರೆ. ಜೊತೆ ಜೊತೆಗೆ ಸ್ವಚ್ಛ ಹೃದಯದವರ ಎಲ್ಲಾ ಮನೋಕಾಮನೆಗಳು ಈಡೇರುತ್ತವೆ. ಪವಿತ್ರ ಹಂಸವಾದ ನನ್ನಲ್ಲಿ ನಾಲ್ಕು ವಿಷಯಗಳಲ್ಲಿ ಅರ್ಥಾತ್ ತನು, ಮನ, ಹೃದಯ ಮತ್ತು ಸಂಬಂಧಗಳಲ್ಲಿ ಸ್ವಚ್ಛತೆಯಿದೆಯೇ? ಎಂದು ಪರಿಶೀಲಿಸಿಕೊಳ್ಳಿರಿ. ಅವರನ್ನೇ ಸಂಪೂರ್ಣ ಪವಿತ್ರರು, 16 ಕಲಾ ಸಂಪನ್ನರು, ಸಂಪೂರ್ಣ

ನಿರ್ವಿಕಾರಿಗಳು ಎಂದು ದೇವತಾ ಸ್ವರೂಪದಲ್ಲಿ ಗಾಯನ ಮಾಡುತ್ತಾರೆ. ಎಂದು ಹೇಳುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ವಚ್ಛತೆ ಮತ್ತು ವಿಶೇಷತೆಯುಳ್ಳ ಹೋಲಿ ಹಂಸ. (ಸ್ವಚ್ಛತೆ: ಮನಸಾ, ವಾಚ, ಕರ್ಮಣಾ, ಸಂಬಂಧ ಎಲ್ಲದರಲ್ಲಿಯೂ ಪವಿತ್ರತೆ ಅರ್ಥಾಥ್ ಸ್ವಚ್ಛತೆ)

2. ನಾನು ಸ್ವಚ್ಛವಾದ ಅಥವಾ ಸತ್ಯವಾದ ಹೃದಯದಿಂದ ಪ್ರಭು (ಪರಮಾತ್ಮ)ವನ್ನು ಪ್ರಸನ್ನ ಮಾಡಿಕೊಂಡಿದ್ದೇನೆ.

3. ನಾನು ಸಂಪೂರ್ಣ ಪವಿತ್ರತೆ ಅಥವಾ ಸಂಪೂರ್ಣ ಸ್ವಚ್ಛತಾ ಸ್ವರೂಪ.

4. ನಾನು ಸಂಪೂರ್ಣ ನಿರ್ವಿಕಾರಿ ಮತ್ತು 16 ಕಲಾ ಸಂಪನ್ನ ಸ್ವರೂಪ.

5. ನಾನು ತನುವನ್ನು ಆತ್ಮಕ್ಕೆ ಮಂದಿರದಂತೆ ಭಾವಿಸಿ ಸ್ವಚ್ಛವಾಗಿ ಇರುವ ಶ್ರೇಷ್ಠ ಮೂರ್ತಿ. (ತನುವಿನ ಸ್ವಚ್ಛತೆ).

6. ನಾನು ಮನ್ಮನಾಭವ ಮಂತ್ರವನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡು ಸ್ವಚ್ಛವಾಗಿ/ ಪವಿತ್ರವಾಗಿ ಇದ್ದೇನೆ. (ಮನಸ್ಸಿನ ಸ್ವಚ್ಛತೆ).

7. ನಾನು • ಸ್ವಪುರುಷಾರ್ಥದ ಸ್ವಚ್ಛತೆ,

• ಸತ್ಯವಾದ ಮನಸ್ಸಿನಿಂದ ಎಷ್ಟು ಸೇವೆ ಮಾಡಿರುವೆನು ಎಂಬ ಸತ್ಯತೆ. ಈ ಎರಡು ನನ್ನ ನಿಜ ಸಂಸ್ಕಾರ, ಸ್ವಧರ್ಮ, ಸ್ವ ಕರ್ಮ. (ಹೃದಯದ ಸ್ವಚ್ಛತೆ).

8. ನಾನು • ಬ್ರಾಹ್ಮಣ ಪರಿವಾರ

• ನನ್ನ ಎದುರಿಗೆ ಬರುವಂತಹ ಜಿಜ್ಞಾಸುಗಳು

• ಲೌಕಿಕ ಪರಿವಾರ ಮೂರು ಸಂಬಂಧಗಳಲ್ಲಿ ಸ್ವಯಂ ಸಂತುಷ್ಟವಾಗಿ ಇರುತ್ತಾ ನನ್ನ ಸಂಬಂಧ ಸಂಪರ್ಕಗಳಲ್ಲಿ ಬರುವ ಇತರ ಆತ್ಮರನ್ನು ಸಂತುಷ್ಟ ಮಾಡಿದ್ದೇನೆ. (ಸಂಬಂಧದ ಸ್ವಚ್ಛತೆ)

9. ನಾನು ಸ್ವಯಂ ಹಗುರವಾಗಿ, ಖುಷಿ ಇರುತ್ತಾ, ಇತರರನ್ನು ಖುಷಿಪಡಿಸಿರುವ ಸಂತುಷ್ಟ ಸ್ವರೂಪ. (ಸಂತುಷ್ಟತೆಗೆ ಗುರುತು)

10. ನಾನು ಸದಾ ಸ್ವಯಂ ಎವರ್ ರೆಡಿಯಾಗಿರುವ ನಂಬರ್ ವನ್ ಮಗುವಾಗಿದ್ದೇನೆ.

11. ನಾನು ಸ್ವಚ್ಛತೆ ಮತ್ತು ಸತ್ಯತೆಯಿಂದ ತಂದೆ ಮತ್ತು ಸೇವೆಯಲ್ಲಿ ತೊಡಗಿರುವುದರಿಂದ ನನ್ನ ಭಂಡಾರವನ್ನು ಸದಾ ಸಂಪನ್ನವಾಗಿ ಇಟ್ಟುಕೊಂಡಿರುವ ಯೋಗ್ಯ ಟೀಚರ್.